ನೋಡಿಕೊಳ್ಳುವುದಕ್ಕೆ ನಾನು ಇದ್ದೇನೆ. ನಿರ್ದಿಷ್ಟವಾದ ದೂರುಗಳು ಇದ್ದರೆ ಮಾನ್ಯ ಸದಸ್ಯರು ಕೊಡಲಿ ನಾನು ತನಿಖೆ ಮಾಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಒಬ್ಬ ಪ್ಲಾನಿಂಗ್ ಆಫೀಸರ್ ೪೦–೫೦ ಲಕ್ಷ ರೂಪಾಯಿಗಳ ಆಸ್ತಿ ಮಾಡಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಅವರು ಅಲ್ಲಿಗೆ ಬಂದು ಕೇವಲ ಎರಡು ವರ್ಷಗಳಾಗಿದೆ.

ಗೋಬರ್ ಗ್ಯಾಸ್‌ಗೆ ನೀಡಿದ ಸಹಾಯ ಧನ

(೧೩೬೦) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ರಾಜ್ಯದಲ್ಲಿ ೧೯೮೭–೮೮ನೇ ಸಾಲಿನ ವರೆಗೆ ಗೋಬರ್ ಗ್ಯಾಸ್‌ಗಾಗಿ ಕೊಡಬೇಕಾದ ಸಬ್ಸಿಡಿ ಹಣದ ವೊಬಲಿಗೆಷ್ಟು

೨. ಜಿಲ್ಲಾವಾರು ಬಿಡುಗಡೆ ಆಗಬೇಕಾದ ಮೊತ್ತ ಮತ್ತು ಪ್ರಯೋಜನದಾರರ ಸಂಖ್ಯೆ ಎಷ್ಟು.

೩. ಬಾಕಿ ಸಬ್ಸಿಡಿ ಹಣ ಯಾವಾಗ ಬಿಡುಗಡೆ ಮಾಡಲಾಗುವುದು.

ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಸಚಿವರು).—

೧. ೧೯೮೭–೮೮ನೇ ಸಾಲಿಗೆ ಕೊಡಬೇಕಾದ ಸಬ್ಸಿಡಿ ಮೊಂಗಡ ಸುಮಾರು ೨೦೨–೨೧ ಲಕ್ಷ ರೂ.ಗಳು (ಫೆಬ್ರುವರಿ ಅಂತ್ಯದವರೆಗೆ)

೨. ಜಿಲ್ಲಾವಾರು ಬಿಡುಗಡೆ ಮಾಡಬೇಕಾದ ಮೊತ್ತ ಮತ್ತು ಪ್ರಯೋಜನದಾರರ ಸಂಖ್ಯೆ ಲಗತ್ತಿಸಿರುವ ಪಟ್ಟಿಯಲ್ಲಿದೆ.

೩. ರೂ. ೧೩೧.೬೦ ಲಕ್ಷಗಳನ್ನು ಪುರವಣಿ ಆಯವ್ಯಯದಿಂದ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಮುಂದಿನ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಅನಿಲಸ್ಥಾವರಗಳಿಗೆ ಜಿಲ್ಲಾವಾರು ಬಾಕಿ ಹಣ ಬಿಡುಗಡೆ ಮಾಡಬೇಕಾಗಿರುವ ಬಗ್ಗೆ ಮಾಹಿತಿ (ಫೆಬ್ರುವರಿ ಅಂತ್ಯದವರೆಗೆ)

ಕ್ರ. ಸಂ.	ಜಿಲ್ಲೆಗಳ ಹೆಸರು	ಬಾಕಿ ಸ್ಥಾವರಗಳ ಸಂಖ್ಯೆ	ಬಿಡುಗಡೆ ಮಾಡಬೇಕಾದ ಹಣ (ಲಕ್ಷಗಳಲ್ಲಿ)
೧.	ಬೆಳಗಾವಿ	೧೪೫	೬.೦೦
೨.	ಬಿಜಾಪುರ	೧೯೨	೪.೮೬
೩.	ಚಿಕ್ಕಮಂಗಳೂರು	೫	೦.೫೦
೪.	ದಕ್ಷಿಣ ಕನ್ನಡ	೩೬	೧೨.೬೦
೫.	ಧಾರವಾಡ	೧೪೯	೭.೫೦
೬.	ಹಾಸನ	೮೫	೩.೮೦
೭.	ಕೊಡಗು	೭೫	೪.೨೫
೮.	ಶಿವಮೊಗ್ಗ	೧೯೧೫	೧೨೨.೦೦
೯.	ಉತ್ತರ ಕನ್ನಡ	೬೭೮	೪೨.೦೦
	ಒಟ್ಟು	೩೨೮೦	೨೦೨.೭೧

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ೧೯೮೭–೮೮ನೇ ಸಾಲಿನಲ್ಲಿ ಸಬ್ಸಿಡಿ ಹಣ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನತೆಯ ಅಭಿವೃದ್ಧಿಗೆ ಸಿಗಬೇತ್ತದೆ. ಅದು ಐ.ಆರ್.ಡಿ.ಪಿ. ಪ್ರೋಗ್ರಾಂ ಇರಬಹುದು ಇನ್ನಿತರೆ ಯಾವುದೇ ಪ್ರೋಗ್ರಾಂ ಇರಬಹುದು. ಬಯೋಗ್ಯಾಸ್ ಪ್ಲಾಂಟ್‌ಗಳಿಗೆ ೧೯೮೭-೮೮ನೇ ಸಾಲಿನಲ್ಲಿ ಸುಮಾರು ೨೦೨ ಲಕ್ಷ ರೂಪಾಯಿಗಳ ಬೇಡಿಕೆ ಇತ್ತು. ಆದರೆ ಇದುವರೆವಿಗೂ ನೀವು ಒಂದು ಪೈಸೆ ಸಹ ಸಬ್ಸಿಡಿ ಕೊಟ್ಟಿಲ್ಲ. ಆ ಸಬ್ಸಿಡಿ ಹಣವನ್ನು ಈಗತಾನೆ ಬಿಡುಗಡೆ ಮಾಡಿದ್ದೀರಿ. ರೈತರು ಬ್ಯಾಂಕ್‌ಗಳಿಂದ ತೆಗೆದುಕೊಂಡಿರತಕ್ಕ ಹಣದ ಮೇಲೆ ಬಡ್ಡಿಯನ್ನು ಹಾಕಂತ್ತಿದ್ದಾರೆ. ಈ ಬಡ್ಡಿ ಹಣವನ್ನು ಸರ್ಕಾರ ಕೊಡುತ್ತದೆ ಅಥವಾ ಯಾರಂ ಕೊಡುತ್ತಾರೆ? ಇನ್ನೂ ಎಷ್ಟು ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಬೇಕಂ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಐ.ಆರ್.ಡಿ.ಪಿ. ಇನ್ನಿತರೆ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ತರಿಸಿಕೊಡುತ್ತೇನೆ. ಆದರೆ ಬಯೋಗ್ಯಾಸ್ ಘಟಕಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ೧೯೮೭–೮೭ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ನಮಗೆ ಒಂದು ಗುರಿಯನ್ನು ಕೊಟ್ಟಿತ್ತು. ಆ ಗುರಿ ದಾಟಿ ಸುಮಾರು ೭ ಸಾವಿರ ಘಟಕಗಳನ್ನು ಹೆಚ್ಚು ಸ್ಥಾಪನೆ ಮಾಡಲಾಯಿತು. ಇದರಿಂದ ಕೇಂದ್ರ ಸರ್ಕಾರದಿಂದ ನಮಗೆ ಸುಮಾರು ೧೪ ಸಾವಿರ ಗ್ಯಾಸ್ ಘಟಕಗಳಿಗೆ ಹಣ ಬರಬೇಕಾಯಿತು. ಆ ಹಣ ಬರುವುದು ಸ್ವಲ್ಪ ತಡವಾಯಿತು. ಬಯೋಗ್ಯಾಸ್ ಪ್ಲಾಂಟ್‌ಗಳನ್ನು ಮಾಡಿರುವ ಗ್ರಾಮಾಂತರ ಪ್ರದೇಶಗಳ ಜನರಿಗೆ ಅನುಧಾನ ಕೊಡುವುದನ್ನು ಸರ್ಕಾರ ನಿಲ್ಲಿಸಿದೆ ಎನ್ನುವುದು ಸರಿಯಲ್ಲ. ಸಮಯಕ್ಕೆ ಸರಿಯಾಗಿ ಕೇಂದ್ರ ಸರ್ಕಾರದಿಂದ ಬಯೋಗ್ಯಾಸ್‌ಗೆ ಸಂಬಂಧಪಟ್ಟಂತೆ ಬರಬೇಕಾದ ಹಣ ಬರದೇ ಇದ್ದ ಕಾರಣ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಬಯೋಗ್ಯಾಸ್ ಪ್ಲಾಂಟ್‌ಗಳಿಗೆ ಇನ್ನು ೭೦ ಲಕ್ಷ ರೂಪಾಯಿಗಳನ್ನು ಮಾತ್ರ ಸರ್ಕಾರ ಬಿಡುಗಡೆ ಮಾಡಬೇಕಾಗಿದೆ. ಈ ಬರುವ ಏಪ್ರಿಲ್ ತಿಂಗಳಿನಲ್ಲಿ ಬಾಕಿ ಉಳಿದಿರುವ ೭೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಬಯೋಗ್ಯಾಸ್ ಪ್ಲಾಂಟ್ ಮಾಡುವುದಕ್ಕೆ ರೈತರುಗಳು ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದಾರೆ. ಸಾಲದ ಬಾಬತ್ತಿಗೆ ಸರ್ಕಾರದವರು ಕೊಡಬೇಕಾದ ಸಬ್ಸಿಡಿ ಹಣವನ್ನು ಕೊಡದೇ ಇರುವುದರಿಂದ ಈ ಹಣಕ್ಕೂ ಬ್ಯಾಂಕಿನವರು ಬಡ್ಡಿ ಹಾಕಿ ರೈತರಿಂದ ವಸೂಲಿ ಮಾಡುತ್ತಿದ್ದಾರೆ. ಗ್ರಾಮೀಣ ರೈತರು ಸಫರ್ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಹಣ ಬರುವುದು ವಿಳಂಬವಾಯಿತೆಂದು ನೀವು ಹೇಳುತ್ತೀರಿ. ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಹಾಗೆ ನೀವು ಹಣ ಬಿಡುಗಡೆ ಮಾಡದೇ ಇರುವುದರಿಂದ ರೈತರು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ನೀವು ಸಬ್ಸಿಡಿ ಹಣ ಕೊಡದೇ ಇರುವುದರಿಂದ ಆ ಹಣಕ್ಕೂ ರೈತರುಗಳು ಬಡ್ಡಿ ಕಟ್ಟಬೇಕಾದ ಪ್ರಮೇಯ ಬಂದಿದೆ. ಈ ಹೆಚ್ಚುವರಿ ಬಡ್ಡಿಯನ್ನು ಕಟ್ಟುವುದಕ್ಕೆ ಸರ್ಕಾರವೇ ಜವಾಬ್ದಾರಿ ತೆಗೆದು ಕೊಳ್ಳಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಸಭಾಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಗೋಬರ್‌ಗ್ಯಾಸ್ ಪ್ಲಾಂಟ್‌ಗಳನ್ನು ಮಾಡಿಕೊಂಡಿರುವ ರೈತರುಗಳು ಕಷ್ಟದಲ್ಲಿದ್ದಾರೆಂದು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದ್ದಾರೆ. ರೈತರುಗಳ ಬಗ್ಗೆ ಸರ್ಕಾರಕ್ಕೂ ಅಪ್ಪೇ ಸಹಾನುಭೂತಿ ಇದೆ. ಕೇಂದ್ರ ಸರ್ಕಾರದವರು ಗೋಬರ್‌ಗ್ಯಾಸ್ ಪ್ಲಾಂಟ್‌ಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಸರಿಯಾದ ಸಮಯದಲ್ಲಿ ಕೊಡದೇ ಇರುವುದರಿಂದ ಈ ತೊಂದರೆಗೆ ಕಾರಣವಾಗಿದೆ ಸರ್ಕಾರವು ಇನ್ನು ೭೦ ಲಕ್ಷ ರೂಪಾಯಿಗಳನ್ನು ಏಪ್ರಿಲ್ ತಿಂಗಳಿನಲ್ಲಿ ಬಿಡುಗಡೆ ಮಾಡಿ ತೊಂದರೆಯನ್ನು ನಿವಾರಣೆ ಮಾಡಲಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಜಿಲ್ಲಾವಾರು ಕೊಟ್ಟಿರುವ ಅಂಶಗಳಲ್ಲಿ ರಾಜ್ಯದ ೯ ಜಿಲ್ಲೆಗಳದು ಮಾತ್ರ ವಿವರಗಳನ್ನು ಕೊಟ್ಟಿದ್ದೀರಿ. ಇನ್ನು ಉಳಿದ ಜಿಲ್ಲೆಗಳ ಮಾಹಿತಿಯನ್ನು ಏಕೆ ಕೊಟ್ಟಿಲ್ಲ ಬೇರೆ ಜಿಲ್ಲೆಗಳಲ್ಲಿ ಫಲಾನುಭವಿಗಳು ಇಲ್ಲವೆ

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರ ತಮ್ಮ ಪ್ರಶ್ನೆಯಲ್ಲಿ ಜಿಲ್ಲಾವಾರು ಬಿಡುಗಡೆ ಆಗಬೇಕಾದ ಮೊತ್ತ ಮತ್ತು ಪ್ರಯೋಜನದಾರರ ಸಂಖ್ಯೆಯೆಷ್ಟು ಎಂದು ಕೇಳಿದ್ದಾರೆ. ಹಣ ಬಿಡುಗಡೆಯಾಗಬೇಕಾಗಿರುವ ಜಿಲ್ಲೆಗಳು ಎಂದರೆ ಈ ೯ ಜಿಲ್ಲೆಗಳು ಮಾತ್ರ. ಉಳಿದ ಜಿಲ್ಲೆಗಳಲ್ಲಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಆದ್ದರಿಂದ, ಉಳಿದ ಜಿಲ್ಲೆಗಳ ಮಾಹಿತಿ

ಯನ್ನು ಇಲ್ಲಿ ಕೊಡಲಾಗಿಲ್ಲ. ಸಬ್ಸಿಡಿ ಪೊತ್ತವನ್ನು ಕೊಡುವುದಕ್ಕೆ ಎಲ್ಲಿ ವಿಳಂಬವಾಗಿದೆ ಎಂಬುದನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಕೆ. ಜಿ. ಎಫ್. ನಲ್ಲಿ ಕುಡಿಯುವ ನೀರಿನ ತೀವ್ರ ಅಭಾವದ ಬಗ್ಗೆ

೧೨೫೫ ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್) ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಬೇತಮಂಗಲ ಜಲಾಶಯದಲ್ಲಿ ಸಾಕಷ್ಟು ನೀರು ಇದ್ದರೂ ಸಹ ಕೆ.ಜಿ.ಎಫ್. ನಲ್ಲಿ ಕುಡಿಯುವ ನೀರಿನ ತೊಂದರೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

೨) ವಿದ್ಯುತ್ ಕಡಿತ ಮತ್ತು ಲೋ ವೋಲ್ಟೆಜ್‌ನಿಂದಾಗಿ ಇರುವ ನೀರನ್ನೂ ಸಹ ಪಂಪ್ ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ.

೩) ವಿದ್ಯುತ್ ಕಡಿತದಿಂದಾಗಿ ಉಂಟಾಗಿರುವ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಲು ಸರ್ಕಾರವು ಈಗಲಾದರೂ ಒಂದು ಡೀಜಲ್ ಜನರೇಟರನ್ನು ಬೇತಮಂಗಲ ನೀರು ಸರಬರಾಜು ಕಾರ್ಯಾಗಾರದಲ್ಲಿ ಅಳವಡಿಸಲು ಸಾಧ್ಯವೇ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

೧) ಬಂದಿದೆ

೨) ಬಂದಿದೆ

೩) ಇದನ್ನು ಪರಿಶೀಲಿಸಲಾಗುವುದು

SRI T.S MANI.--What action the Government proposes to take?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಕೆ.ಜಿ.ಎಫ್. ನಲ್ಲಿ ಮೂರು ವಿಭಾಗಗಳಾಗಿ ಪ್ರದೇಶಗಳು ಇವೆ. ಒಂದು, ರಾಬರ್ಟ್‌ಸನ್‌ಪೇಟೆ, ಎರಡು ಬಿ.ಜಿ. ಎಂ, ಎಲ್ ಹಾಗೂ ಇನ್ನೊಂದು ಬಿ.ಇ.ಎಂ.ಎಲ್. ಹೀಗೆ ಮೂರು ಪ್ರದೇಶಗಳ ಒಂದು ನಗರ ಅದು. ಸುಮಾರು ೧ ಲಕ್ಷದ ೭೧ಸಾವಿರ ಜನಸಂಖ್ಯೆ ಅಲ್ಲಿದೆ. ನೀರು ವ್ಯವಸ್ಥೆ ಸಾಮಾನ್ಯವಾಗಿ ಈಗ ಆಗುತ್ತಾ ಇದ್ದು, ದಿನದಲ್ಲಿ ೧೦ ಗಂಟೆ ವಿದ್ಯುಚ್ಛಕ್ತಿ ಕಡಿತ ಆಗಿರುವ ಕಾರಣ ತೊಂದರೆ ಆಗಿರುವುದರಿಂದ ಸರಬರಾಜಿನಲ್ಲಿ ಕಡಿತವಾಗಿದೆ. ನೀರು ಸರಬರಾಜು ೧೯ ಎಂಜಿಟಿ ಇದ್ದಾದರಲ್ಲಿ ೧೧.೨೫ ಎಂಜಿಯಷ್ಟು ಸರಬರಾಜು ಆಗಿದೆ. ಕೆರೆಯಲ್ಲಿ ನೀರು ಇದೆ. ವಿದ್ಯುಚ್ಛಕ್ತಿ ಕಡಿತದಿಂದ ನೀರು ಸರಬರಾಜಿಗೆ ಅಡ್ಡಿಯಾಗಿದೆ. ಇನ್ನೊಂದು ವಿಚಾರ ಏನೆಂದರೆ ಅಲ್ಲಿ ೮೧ ಕೊಳವೆಬಾವಿಗಳು ಇವೆ. ಅವುಗಳಲ್ಲಿ ೧೬ಕ್ಕೆ ಪಂಪ್‌ಗಳನ್ನು ಅಳವಡಿಸಿದ್ದೇವೆ. ೮೧ಕ್ಕೆ ಕೈಪಂಪುಗಳನ್ನು ಅಳವಡಿಸಿದ್ದೇವೆ ಬೇತಮಂಗಲ ಕೆರೆಯಿಂದ ಬರುವ ನೀರು ಕಡಿಮೆ ಆಗಿರುವ ಕಾರಣ ಅಲ್ಲಿ ಸ್ವಲ್ಪ ತೊಂದರೆಯಾಗಿದೆ.

ಶ್ರೀ ಟಿ. ಎಸ್. ಮಣಿ.—ಅಲ್ಲಿ ಡೀಸಲ್ ಇಂಜೀನಿಂದ ಜನರೇಟರ್ ಹಾಕಿದರೆ ಆ ಸಮಸ್ಯೆಯನ್ನು ಪರಿಹಾರ ಮಾಡಿದಹಾಗೆ ಆಗುತ್ತದೆ ಅದನ್ನು ಮಾಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್,—ಮಾನ್ಯ ಸದಸ್ಯರು ಪರಿಹಾರವನ್ನು ಹೇಳಿದ್ದಾರೆ. ಆದರೆ ಒಂದು ಡಿಸಲ್ ಪಂಪ್ ರನ್ ಮಾಡಬೇಕಾಗಿದ್ದರೆ, ಒಂದು ಯೂನಿಟ್‌ಗೂ ಬೆಲೆ ಜಾಸ್ತಿಯಾಗುತ್ತದೆ. ಆ ಜಾಸ್ತಿಯಾದ ಬೆಲೆಯನ್ನು ದರಗಳ ಮಾರ್ಪಾಂತರ ನಾವು ಸಾರ್ವಜನಿಕರಿಗೆ ತೆರಿಗೆಯನ್ನು ವಿಧಿಸಬೇಕಾಗುತ್ತದೆ. ಸಾರ್ವಜನಿಕರು ಜಾಸ್ತಿಯಾದ ದರವನ್ನು ಕೊಡಲು ಒಪ್ಪಿದರೆ ಆ ವ್ಯವಸ್ಥೆಯನ್ನು ಮಾಡಬಹುದು ಹುಬ್ಬಳ್ಳಿಯಲ್ಲಿ ಒಂದು ಡಿಸೇಲ್ ಜನರೇಟರ್ ಇದೆ ಎಂದು ಹೇಳಿದ್ದಾರೆ, ಅದನ್ನು ತಂದು ಅಳವಡಿಸ ಬಹುದಾಗಿದೆ. ಅದರ ಬಗ್ಗೆ ಬಗ್ಗೆ ಸಾರ್ವಜನಿಕರು ವಿಚಾರ ಮಾಡಬೇಕು.

ಶ್ರೀ ಟಿ, ಎಸ್. ಮಣಿ.—ಅದನ್ನು ಸ್ವಲ್ಪ ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ಪರಿಶೀಲಿಸುತ್ತೇನೆ.